ಅಸಲು ದಾವೆ ಸಂಖ್ಯೆ - 236/2021
ಡಿ.ಡಬ್ಲ್ಯೂ - 01
ದಿನಾಂಕ: 25-06-2025
ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟೀ ಸವಾಲು: ವಾದಿ ಪರ ಶ್ರೀ. ಎಮ್ ಎಮ್ ಪಿ ವಕೀಲರಿಂದ**

ನಿಮ್ಮ ಹೊಲದ ಸರ್ವೆ ನಂ. ಹೇಳಲು ಆಗುತ್ತದೆಯಾ ಎಂದರೆ 15/3 ಇರುತ್ತದೆ. ಅದರ ವಿಸ್ತಿರ್ಣ ಎಷ್ಟು ಎಂದರೆ 2 ಎಕರೆ 36 ಗುಂಟೆ ಇರುತ್ತದೆ. ವಾದಿಯ ಆಸ್ತಿ ನಂಬರ ಎಷ್ಟು ಎಂದರೆ 15/4 ಇರುತ್ತದೆ, ವಿಸ್ತೀರ್ಣ ಗೊತ್ತಿಲ್ಲ. ನಿಮ್ಮ ಜಮೀನಿನ ಯಾವ ದಿಕ್ಕಿಗೆ ವಾದಿಯ ಜಮೀನು ಬರುತ್ತದೆ ಎಂದರೆ ಪೂರ್ವ ದಿಕ್ಕಿಗೆ ಎಂದು ನುಡಿಯುತ್ತಾರೆ. ವಾದಿಯ ಜಮೀನಿನ ಪೂರ್ವ ದಿಕ್ಕಿಗೆ ಯಾರ ಜಮೀನು ಬರುತ್ತದೆ ಎಂದರೆ ನಮ್ಮದೇ ಜಮೀನು ಬರುತ್ತದೆ. ಪಶ್ಚಿಮಕ್ಕೆ: ರಾಮಪ್ಪ ಅಂಗಡಿ ರವರ ಜಮೀನು ಬರುತ್ತದೆ. ಉತ್ತರಕ್ಕೆ ಸುರೇಶ ಗಾಣಿಗೇರ ರವರ ಜಮೀನು ಬರುತ್ತದೆ. ದಕ್ಷಿಣಕ್ಕೆ: ಈರಪ್ಪ ಅಂಗಡಿ ರವರ ಜಮೀನು ಬರುತ್ತದೆ. ಅವರ ಸರ್ವೆ ನಂ. 15/8 ಎಂದರೆ ಸರಿ.

ಸರ್ವೆ ನಂ. 15/4 ರಲ್ಲಿರುವ 6 ಗುಂಟೆ ಜಮೀನನ್ನು 2016 ರಿಂದ ಒತ್ತುವರಿ ಮಾಡಿರುತ್ತೀರಿ ಎಂದರೆ ಸರಿಯಲ್ಲ. ಮುಂದುವರೆದು ಅದು ನಮ್ಮದೇ ಜಮೀನು. ನಾವೇ ಕಬ್ಜೆಯಲ್ಲಿ ಇದ್ದೇವೆ. ಸರ್ವೆ ನಂ. 15/4 ರಲ್ಲಿ ಯಾವುದೇ ರಸ್ತೆ ಹೋಗಿಲ್ಲ ಎಂದರೆ ಸರಿ. ವಾದಿಯು ಹೆಣ್ಣುಮಗಳು ಆಗಿರುವುದರಿಂದ ಅವರ 6 ಗುಂಟೆ ಜಮೀನನ್ನು ಒತ್ತುವರಿ ಮಾಡಿರುತ್ತೀರಿ ಎಂದರೆ ಸರಿಯಲ್ಲ. ಮುಂದುವರೆದು ನಮ್ಮ ತಂದೆಯ ಕಾಲದಿಂದಲೂ ನಾವೇ ಕಬ್ಜೆಯಲ್ಲಿ ಇದ್ದೇವೆ.

ಈ ಕುರಿತು ವಾದಿಯು ಜಮೀನನ್ನು ಅಳತೆ ಮಾಡಲು ಎ ಡಿ ಎಲ್ ಅರ್ ರವರಿಗೆ ಅರ್ಜಿಯನ್ನು ನೀಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಮುಂದುವರೆದು ನಾನು ಅಂದು ಇರಲಿಲ್ಲ. ಅಳತೆ ಮಾಡಲು ಸರ್ವೇ ಅಧಿಕಾರಿಗಳು ಬರುತ್ತಾರೆ ಎಂಬುದು ನಿಮಗೆ ಗೊತ್ತಿತ್ತು ಎಂದರೆ ಸರಿ. ಮುಂದುವರೆದು ನಮ್ಮ ಅಕ್ಕ ರವರು ತೀರಿಕೊಂಡಿದ್ದರಿಂದ ನಾವು ಮಣ್ಣಿಗೆ ಹೋಗಿದ್ದೇವು. ಡಿ ಡಿ ಎಲ್ ಆರ್ ರವರು ಅಳತೆ ಮಾಡಿದ ಪ್ರಕಾರ ವಾದಿಯ ಜಮೀನಿನ ಪಶ್ಚಿಮ ದಿಕ್ಕಿನಲ್ಲಿ 6 ಗುಂಟೆ ಜಮೀನನ್ನುನೀವು ಒತ್ತುವರಿ ಮಾಡಿದ್ದೀರಿ ಎಂದರೆ ನನಗೆ ಗೋತ್ತಿರುವುದಿಲ್ಲ.

ವಾದಿಯ ಜಮೀನಿನ ಪೂರ್ವ ದಿಕ್ಕಿಗೆ ನಿಮ್ಮದೆ ಸರ್ವೆ ನಂ. 15/3 ಜಮೀನು ಇದೆ

ಎಂದರೆ ಸರಿ. ವರದಿಯಲ್ಲಿ ಸರ್ವೆ ನಂ. 15/4 ರಲ್ಲಿ 06 ಗುಂಟೆ ಜಮೀನನ್ನು ನೀವು ಒತ್ತುವರಿ ಮಾಡಿದ್ದೀರಿ ಎಂದು ನೆರಳೆ ಬಣ್ಣದಲ್ಲಿ ತೋರಿಸಿದ್ದಾರೆ ಎಂದರೆ ನಾವು ಒತ್ತುವರಿ ಮಾಡಿಲ್ಲ ಎಂದು ನುಡಿಯುತ್ತಾರೆ.

ನಾನು 3 ನೇ ತರಗತಿಯವರೆಗೂ ವ್ಯಾಸಂಗ ಮಾಡಿದ್ದೇನೆ. ಒತ್ತುವರಿ ಮಾಡಿದ್ದನ್ನು ತೆರುವುಗೊಳಿಸಬೇಕೆಂದು ವಾದಿಯು ಅರ್ಜಿ ನೀಡಿದ್ದರು ಎಂದರೆ ಸರಿ. ಆಗ ತಹಶೀಲ್ದಾರ ಕಚೇರಿಯಲ್ಲಿ ನೀವು ಹಾಜರಿದ್ದರಿ ಎಂದರೆ ಸರಿ. ಮಾನ್ಯ ತಹಶೀಲ್ದಾರವರು ಒತ್ತುವರಿ ಮಾಡಿಕೊಂಡ ಜಮೀನನ್ನು ವಾದಿಗೆ ಬಿಟ್ಟು ಕೊಡಬೇಕು ಎಂದು ಆದೇಶ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಮುಂದುವರೆದು ನೀವು ಬೇಕಾದರೆ ಅಳತೆ ಮಾಡಿಸಿ ಎಂದು ಹೇಳಿರುತ್ತಾರೆ. ನೀವೆನಾದರೂ ಅಳತೆ ಮಾಡಿಸಲು ಅರ್ಜಿಯನ್ನು ನೀಡಿದ್ದೀರಾ ಎಂದರೆ 2004-05 ರಲ್ಲೇ ಅರ್ಜಿಯನ್ನು ನೀಡಿದ್ದೇವೆ. ಆದರೆ ಇಲ್ಲಿಯವರೆಗೂ ಅಳತೆ ಮಾಡಿಲ್ಲ. ನೀವೆನಾದರೂ ಅಧಿಕಾರಿಗಳಿಗೆ ಏಕೆ ಅಳತೆ ಮಾಡಿಲ್ಲ ಎಂದು ಪ್ರಶ್ನಿಸಿದ್ದೀರಾ ಎಂದರ ಕೆಳಗೆ ಇರುವ ಜಮೀನುಗಳಿಂದ ಅಳತೆ ಮಾಡಿಕೊಂಡು ಬರಬೇಕು ಅದಕ್ಕೆ ಕೋರ್ಟ ಆದೇಶ ಬೇಕು ಎಂದು ನುಡಿಯುತ್ತಾರೆ.

ಸಾಮಾನ್ಯವಾಗಿ ಡಿ ಡಿ ಎಲ್ ಆರ್ ರವರು ಅಳತೆ ಮಾಡಿದ ನಂತರ ಬಾಂದಗಲ್ಲನ್ನು ನಿಲ್ಲಿಸಿ ಹೋಗುತ್ತಾರೆ ಎಂದರೆ ಸರಿ. ಸದರಿ ಬಾಂದಗಲ್ಲನ್ನು ನೀವು ಕಿತ್ತು ಹಾಕಿರುತ್ತೀರಿ ಎಂದರೆ ರಾತ್ರಿ ಹೊತ್ತಿನಲ್ಲಿ ರಂಟೆ ಹೋಡೆದಾಗ ಕಿತ್ತು ಹೋಗಿರುತ್ತದೆ ಎಂದು ನುಡಿಯುತ್ತಾರೆ. ರಂಟೆಯನ್ನು ಯಾರು ಹೊಡೆಯುತ್ತಿದ್ದರು ಎಂದರೆ ನಾನೇ ಹೊಡೆಯುತ್ತಿದ್ದೇನು. ಸದರಿ ಬಾಂದಗಲ್ಲನ್ನು ಕಿತ್ತಿ ಹೋಗಿದಕ್ಕೆ ವಾದಿಯು ತಹಶೀಲ್ದಾರವರಿಗೆ ಅರ್ಜಿಯನ್ನು ನೀಡಿರುತ್ತಾರೆ ಎಂದರೆ ನನಗೆ ಮಾಹಿತಿ ಇಲ್ಲ. ನಂತರ ತಹಶೀಲ್ದಾರವರು ನಿಮ್ಮನ್ನು ಕರೆಯಿಸಿ ಎಚ್ಚರಿಕೆ ನೀಡಿ ಬಾಂದಗಲ್ಲನ್ನು ಕಿತ್ತು ಹಾಕಿದಕ್ಕೆ ರೂ. 200/- ನ್ನು ದಂಡ ಹಾಕಿರುತ್ತಾರೆ ಎಂದರೆ ಸರಿಯಲ್ಲ. ಇನ್ನೊಂದು ಸಲ ಹಾಗೆ ಮಾಡಿದರೆ ನಿಮ್ಮ ಮೇಲೆ ಪೋಲಿಸ ಪ್ರಕರಣದ ದಾಖಲು ಆಗುತ್ತದೆ ಎಂದು ಹೇಳಿದರು ಎಂದರೆ ಸರಿಯಲ್ಲ.

ವಾದಿಯು ನೀವು ಒತ್ತುವರಿ ಮಾಡಿದ ಬಿಟ್ಟು ಕೊಡಿ ಎಂದು ಹಲವಾರು ಬಾರಿ ಕೇಳಿರುತ್ತಾರೆ ಎಂದರೆ ಸರಿಯಲ್ಲ. ಹಲವಾರು ಕೇಳಿದ್ದರು ಸಹ ನೀವು ಒತ್ತುವರಿ ಜಮೀನನ್ನು ಬಿಟ್ಟು ಕೊಟ್ಟಿರುವುದಿಲ್ಲ ನಾವು ಅಳತೆ ಮಾಡಿಸಿ ನೊಡುತ್ತೇವೆ ಎಂದು ಹೇಳಿರುತ್ತೇವೆ.

ತಹಶೀಲ್ದಾರ ರವರಿಗೆ ಅರ್ಜಿ ನೀಡಿದ ಸಂಖ್ಯೆಃ ಎಲ್ ಎನ್ ಡಿ 367-16/17 ಎಂದರೆ ನಂಬರ ನನಗೆ ಗೊತ್ತಿಲ್ಲ. ಅದನ್ನು ದಿಃ 21-04-2017 ರಂದು ತಹಶೀಲ್ದಾರವರು ಒತ್ತುವರಿಯನ್ನು ತೆರವುಗೊಳಿಸಲು ಆದೇಶ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

ವಾದಿಗೆ ತೊಂದರೆ ಕೊಡುವ ಸಲುವಾಗಿ ಒತ್ತುವರಿ ಮಾಡಿದ ಜಮೀನನ್ನು ಬಿಟ್ಟು ಕೊಡುತ್ತಿಲ್ಲ ಎಂದರೆ ನಾವು ಒತ್ತುವರಿ ಮಾಡಿಲ್ಲ ಎಂದು ನುಡಿಯುತ್ತಾರೆ. ವಾದಿಗೆ ಯಾರು ಮಕ್ಕಳು ಇಲ್ಲ ಎಂದರೆ ಸರಿ. ಆದ ಕಾರಣ ವಾದಿಯ ಜಮೀನನ್ನು ಪಡೆದುಕೊಳ್ಳುವ ಸಲುವಾಗಿ ಒತ್ತುವರಿ ಮಾಡಿದ್ದೀರಿ ಎಂದರೆ ಸರಿಯಲ್ಲ. ಒತ್ತುವರಿ ಮಾಡಿದ್ದರು ಮಾಡಿಲ್ಲ ಎಂದು ಸುಳ್ಳು ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು.ಸವಣೂರು.